ಕೂಡ ಹೋಗಿಲ್ಲ. ಕೋಟ್ಯಾಂತರ ರೂಪಾಯಿಗಳು ಗ್ರಾಂಟ್ಸ್‌ನ್ನು ರಿಲೀಸ್ ಮಾಡಿಲ್ಲ. ಸಾವಿರಾರು ಜನ ಓಲ್ಡ್‌ಏಜ್ ಪೆನ್‌ಷನ್, ವಿಡೋ ಪೆನ್‌ಷನ್‌ನವರಿಗೂ ಕೂಡ ಇಲ್ಲಿಯವರೆವಿಗೂ ಹಣ ಮುಟ್ಟಿಲ್ಲ. ತಮ್ಮ ಹತ್ತಿರ ದುಡ್ಡು ಇದ್ದಿದ್ದರೆ ಈ ಪರಿಸ್ಥಿತಿ ಏತಕ್ಕೆ ಬಂತು? ಸಂಬಳ ಕೊಡತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲ ಅಂದರೆ ನಾವು ಏನು ಹೇಳಬೇಕು? ಅನೇಕ ಕಡೆಗಳಲ್ಲಿ ೩ ತಿಂಗಳು ೬ ತಿಂಗಳುಗಳಿಂದ ಸಂಬಳ ಕೊಟ್ಟಿಲ್ಲ. ಇನ್ನು ತೋಟಿತಳವಾರರಿಗೆ ಅನೇಕ ಕಡೆಗಳಲ್ಲಿ ಹಣ ಬಿಡುಗಡೆ ಮಾಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಸಾಕಷ್ಟು ಚರ್ಚೆ ಮಾಡಲಿಕ್ಕೆ ಅವಕಾಶ ಇನ್ನು ಕೆಲವೇ ದಿವಸಗಳಲ್ಲಿ ಸಿಕ್ಕುತ್ತದೆ. ಬಜೆಟ್ ಮಂಡಿಸುವ ಅವಧಿಯಲ್ಲಿ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡುತ್ತೇನೆ. ಎಲ್ಲಾ ಕಡೆ ಸಂಬಳ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—೬೦೦–೭೦೦ ಹೆಣ್ಣು ಮಕ್ಕಳು ಇಲ್ಲಿಯೇ ಕುಳಿತಿದ್ದಾರೆ, ಅವರಿಗೆ ೬ ತಿಂಗಳಿಂದ ಸಂಬಳ ಕೊಟ್ಟಿಲ್ಲ.

ಗುಲ್ಬರ್ಗ ಜಿಲ್ಲೆಯ ಧಾರ್ಮಿಕ ಸ್ಥಳಗಳಿಗೆ ಸಾರಿಗೆ ಸೌಲಭ್ಯಗಳು

೧೩೯ (೯೭) ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರವಾಸಿಗರಿಗಾಗಿ ಐತಿಹಾಸಿಕ ಮತ್ತು ಧಾರ್ಮಿಕ ಸ್ಥಳಗಳನ್ನು ತೋರಿಸಲು ಪ್ರವಾಸೋದ್ಯಮ ಮಂಡಳಿಯವರು ತಮ್ಮ ವಾಹನಗಳನ್ನು ಓಡಾಡಿಸುವ ಮತ್ತು ವಾಯುದೂತದ ನಿಲ್ದಾಣ ನಿರ್ಮಾಣದ ಉದ್ದೇಶವೇನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಪ್ರವಾಸಿಗರಿಗಾಗಿ ತೋರಿಸುವ ಸ್ಥಳಗಳು ಮತ್ತು ವಾಹನಗಳ ಮಾರ್ಗ ಅದಲ್ಲದೆ, ವಾಯುದೂತ ಪ್ರಾರಂಭಮಾಡಲು ಕ್ರಮ ಕೈಗೊಳ್ಳುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—

ಅ) ಹೌದು.

ಆ) ಪ್ರೇಕ್ಷಕರಿಗೆ ಅನುಕೂಲವಾಗಲು ಗುಲ್ಬರ್ಗ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ಒಂದು ವಾಹನವನ್ನು ಒದಗಿಸಲು ಉದ್ದೇಶಿಸಿದ್ದಾರೆ.

ಇನ್ನು ಗುಲ್ಬರ್ಗ ಪಟ್ಟಣಕ್ಕೆ ವಾಯುದೂತ ಸಂಪರ್ಕ ಕಲ್ಪಿಸಲು ನಿಲ್ದಾಣಕ್ಕೆ ಬೇಕಾದಆಗತ್ಯ ಜಮೀನನ್ನು ಈಗಾಗಲೇ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ವಿಮಾನ ನಿಲ್ದಾಣ ರಚನೆಯಾದ ಕೂಡಲೇ ವಾಯುದೂತ ಸೇವೆಯನ್ನು ಆರಂಭಿಸಲು ಕೇಂದ್ರ ಸರ್ಕಾರವನ್ನು ಕೋರಲಾಗುವುದು.

ಶ್ರೀ ಎಸ್. ಕೆ. ಕಾಂತಾ.—ಗುಲ್ಬರ್ಗ ನಗರದಲ್ಲಿ ಬಹುಮನಿ ಕಾಲದ ಫೋರ್ಟ್ ಇದೆ. ಅದು ಇಡೀ ಏಷ್ಯಾದಲ್ಲಿಯೇ ಮೊದಲನೆಯ ಸ್ಥಾನ ಹೊಂದಿರತಕ್ಕ ಕಟ್ಟಡ. ಅದರ ಬಗ್ಗೆ ಪ್ರವಾಸೋದ್ಯಮ ನಿಗಮದವರು ಟೂರಿಸ್ಟ್ ಮ್ಯಾಪ್‌ನಲ್ಲಿ ತೋರಿಸಿಲ್ಲ. ಅದೇರೀತಿ ಗುಲ್ಬರ್ಗದಲ್ಲಿ ಖಿಜಾ ಬಂದೇ ನವಾಜ್ ದರ್ಗ ಇದೆ. ಇದೂ ಸಹ ಇಡೀ ದೇಶದಲ್ಲಿಯೇ ದೊಡ್ಡ ದರ್ಗ. ಅದರ ಬಗ್ಗೆಯೂ ಸಹ ಟೂರಿಸ್ಟ್ ಮ್ಯಾಪ್‌ನಲ್ಲಿ ತೋರಿಸಿಲ್ಲ ಇದನ್ನೆಲ್ಲಾ ನೋಡಿದರೆ ಸರ್ಕಾರ ನಮ್ಮ ಭಾಗವನ್ನೇ ಸಂಪೂರ್ಣ ಅಲಕ್ಷ್ಯ ಮಾಡಿದೆ ಎಂದು ಹೇಳಬಹುದು. ಪ್ರವಾಸೋದ್ಯಮದವರು ಇಲ್ಲಿಯವರೆಗೆ ಯಾವುದೇ ರೀತಿಯ ಸೌಲಭ್ಯವನ್ನು ನಮ್ಮ ಭಾಗಕ್ಕೆ ಕೊಟ್ಟಿಲ್ಲ, ಆದ್ದರಿಂದ, ಎಲ್ಲಾ ರೀತಿಯ ಸೌಲಭ್ಯಗಳನ್ನು ನಮ್ಮ ಭಾಗಕ್ಕೆ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇನ್ನೊಂದು ವಿಷಯ ಎಂದರೆ, ಪ್ರವಾಸಿಗಳು ಬರತಕ್ಕ ಸ್ಥಳದಲ್ಲಿ ಎಷ್ಟೋ ವರ್ಷಗಳಿಂದ ಆಲ್ಲಿ ಒಂದು ಹೆಂಡದ ಅಂಗಡಿ ನಡೆಯುತ್ತಿತ್ತು. ಇಡೀ ಗುಲ್ಬರ್ಗ ಜನರ ಒಂದು ಒತ್ತಡದಿಂದಅದು ಬಂದ್ ಆಯಿತು. ಅನಂತರ ಮತ್ತೆ ಅದನ್ನು ಪ್ರಾರಂಭ ಮಾಡಿದ್ದಾರೆ, ಅದನ್ನು ನಿಲ್ಲಿಸಬೇಕೆಂದು ನಾನು ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಗುಲ್ಬರ್ಗ ಪ್ರದೇಶ ಪ್ರವಾಸಿಗರನ್ನು ಆಕರ್ಷಿಸತಕ್ಕಂಥ ಅನೇಕ ಐತಿಹಾಸಿಕ ಸ್ಥಳ ಮತ್ತು ಕಟ್ಟಡಗಳನ್ನು ಒಳಗೊಂಡಿದ್ದರೂ, ಪ್ರವಾಸಿಗರ ಒಂದು ಆಕರ್ಷಣೆ ಮಾಡತಕ್ಕ ಕೇಂದ್ರ ಮಾಡಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಮುಖ್ಯ ತೊಂದರೆ

ಏನೆಂದರೆ, ಅಲ್ಲಿ ಹೋಗಿ ಬರತಕ್ಕಂಥ ಸಂಚಾರದ ವ್ಯವಸ್ಥೆ ಸಮರ್ಪಕವಾಗಿ ಇಲ್ಲ. ಆದುದರಿಂದ ವಾಯುದೂತದ ಸರ್ವೀಸ್ ಆದಷ್ಟು ಬೇಗ ಮಾಡಬೇಕೆಂದು ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಇನ್ನು ಮಾನ್ಯ ಸದಸ್ಯರಾದ ಕಾಂತಾರವರು ಹೇಳಿದಂತೆ ಅಲ್ಲಿರತಕ್ಕ ದರ್ಗ ಆಗಲಿ, ಮತ್ತು ಬೇರೆ ರೀತಿಯ ಮಸೀದಿಯಾಗಲಿ, ಇನ್ನು ಕೆಲವು ಸ್ಥಳಗಳು ಏನು ಇವೆ, ಅವುಗಳನ್ನು ಪಟ್ಟಿ ಮಾಡಿ ನಾವು ಟೂರಿಸ್ಟ್ ಮ್ಯಾಪ್‌ನಲ್ಲಿ ತೋರಿಸುತ್ತೇವೆ ಎಂದು ಹೇಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳಪಟ್ಟಿ

ದಾವಣಗೆರೆ ನಗರಕ್ಕೆ ಟೆಲಿಪ್ರಿಂಟರ್ ವ್ಯವಸ್ಥೆ

೧೪೩ (೩೭೮) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ:—

ದಾವಣಗೆರೆ ನಗರವು ಸುಮಾರು ಮೂರು ಲಕ್ಷ ಜನ ಸಂಖ್ಯೆ ಹೊಂದಿರುವ ನಗರವಾಗಿದ್ದು ಸುಮಾರು ಏಳೆಂಟು ದಿನ ಪತ್ರಿಕೆಗಳು ಹೊರಡುತ್ತಿರುವುದರಿಂದ ಅಲ್ಲಿಗೆ ಟೆಲಿಪ್ರಿಂಟರ್ ವ್ಯವಸ್ಥೆಯನ್ನು ಮಾಡಲಾಗುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಸರ್ಕಾರದ ನೀತಿಯಂತೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಟೆಲಿಪ್ರಿಂಟರ್ ಸೌಲಭ್ಯವನ್ನು ಜಿಲ್ಲಾ ವಾರ್ತಾ ಹಾಗೂ ಪ್ರಚಾರಾಧಿಕಾರಿಗಳ ಕಛೇರಿಗಳಲ್ಲಿ ಒದಗಿಸಲಾಗಿದೆ. ಬೃಹತ್ ನಗರ ಪಟ್ಟಣಗಳಲ್ಲಿ ಈ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಸದ್ಯಕ್ಕೆ ಉದ್ದೇಶಿಸಿಲ್ಲ.

ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಬಿ. ರಾಚಯ್ಯ.—(ಮಾನ್ಯ ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹೊನ್ನಾಳಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯನ್ನಾಗಿ ಪರಿವರ್ತಿಸುವ ಬಗ್ಗೆ

೧೬೦ (೪೦೨) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹೊನ್ನಾಳಿಯಲ್ಲಿ ಈಗ ಹಾಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಆಸ್ಪತ್ರೆಯನ್ನು ಸಾರ್ವತ್ರಿಕ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಸರ್ಕಾರದವರಿಗೆ ಇರುವ ತೊಂದರೆಗಳೇನು ?

ಆ) ಸರ್ಕಾರದವರು ಕೇಳುವ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿದಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗುವುದೇ ?

ಇ) ಹಾಗಿದ್ದಲ್ಲಿ, ೧೯೮೬-೮೭ ರ ವರ್ಷದಲ್ಲಾದರೂ ಸಾರ್ವಜನಿಕ ಆಸ್ಪತ್ರೆಯನ್ನು ಸರ್ಕಾರದವರು ಮಂಜೂರು ಮಾಡುವರೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಹೊನ್ನಾಳಿಯು ಒಂದು ತಾಲ್ಲೂಕು ಕೇಂದ್ರವಾಗಿದ್ದು ಸರ್ಕಾರದ ನೀತಿಯಂತೆ ಅಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಬಹುದಾಗಿದೆ. ಆದರೆ ರಾಜ್ಯದಲ್ಲಿ ಈ ರೀತಿ ಮೇಲ್ದರ್ಜೆಗೇರಿಸಬೇಕಾದ ಇನ್ನೂ ಅನೇಕ ಆಸ್ಪತ್ರೆಗಳಿವೆ. ಯೋಜನಾ ವೆಚ್ಚದ ಮಿತಿಯಿಂದ ಇವುಗಳನ್ನು ಹಂತಹಂತವಾಗಿ ಪರಿಗಣಿಸಲಾಗುವುದು.

ಆ) ಪರಿಶೀಲಿಸಲಾಗುವುದು.